70 (115): ಶ್ರೀ. ಶಂಕರ ಲಿಂಗೇಗೌಡ. ಹೆಚ್.ಎಸ್ (ಚಾಮರಾಜ)

ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಮೈಸೂರು ನಗರದಲ್ಲಿ ತೋಟಗಾರಿಕೆ ಇಲಾಖೆಗೆ ಸೇರಿದ ಉದ್ಯಾನವನಗಳು ಯಾವವು (ವಿವರ ನೀಡುವುದು)

ಆ) ಇವುಗಳಲ್ಲಿ ಯಾವ ಯಾವ ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿ ಪೂರ್ಣ ಗೊಂಡಿದೆ. ಇದಕ್ಕೆ ತಗಲಿದ ವೆಚ್ಚ ಎಷ್ಟು?

ಇ) ಯಾವ ಯಾವ ಪಾರ್ಕ್‌ಗಳ ಅಭಿವೃದ್ಧಿ ಕಾರ್ಯ ಕೈಗೆತ್ತಿ ಕೊಳ್ಳಬೇಕಾಗಿದೆ. ಯಾವಾಗ ಕಾಮಗಾರಿ ಪೂರ್ಣಗೊಳಿಸಲಾಗುವುದು.

ಶ್ರೀ ಶಶಿಕಾಂತ ಲ. ಅಕ್ಕಪ್ಪನಾಯಕ್

ಅ) ಮೈಸೂರು ನಗರದಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ ಉದ್ಯಾನವನಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 2006–07ನೇ ಸಾಲಿನಲ್ಲಿ ಕರ್ಜನ್ ಪಾರ್ಕ್ ಬ್ಲಾಕ್ 2, ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ, ಕೇಂದ್ರ ಸಸ್ಯಾಗಾರಗಳಲ್ಲಿ ತೋಟಗಾರಿಕೆ ಇಲಾಖೆಯಿಂದ ಕಾಮಗಾರಿ ಕೈಗೊಳ್ಳಲಾಗಿತ್ತು. ಕರ್ಜನ್ ಪಾರ್ಕ್ ಬ್ಲಾಕ್ 3 ರ ಅಭಿವೃದ್ಧಿಯನ್ನು ಮೈಸೂರು ಮಹಾನಗರ ಪಾಲಿಕೆಗೆ ವಹಿಸಲಾಗಿದೆ. ಉಳಿದ ಪಾರ್ಕುಗಳಲ್ಲಿ ನಿರ್ವಹಣೆ ಮಾತ್ರ ಮಾಡಲಾಗುತ್ತಿದೆ. ಕಾಮಗಾರಿ ಕೈಗೊಂಡ ಪಾರ್ಕುಗಳ ವಿವರ ಈ ಕೆಳಕಂಡಂತಿವೆ.

ಉದ್ಯಾನವನ	ತಗಲಿದ ವೆಚ್ಚ ಲಕ್ಷಗಳಲ್ಲಿ	ಕಾಮಗಾರಿ ಹಂತ
1. ಕರ್ಜನ್ ಪಾರ್ಕ್ ಬ್ಲಾಕ್–1 02.00ಲಕ್ಷ 09.80 ಲಕ್ಷ	09.80	ಇಂಟರ್ ಲಾಕ್ ಪೇವ್ ಮೆಂಟ್ 06.00ಲಕ್ಷ ಗಾರ್ಡನ್ ಲೈಟ್ಸ 01.80ಲಕ್ಷ ಸ್ಪ್ರಿಂಕಲರ್ ಸಿಸ್ಟಂ ಅಳವಡಿಕೆ. ಫೆಬ್ರವರಿ 2007 ರಲ್ಲಿ ಒಟ್ಟು ರೂಪಾಯಿಗಳನ್ನು ಜಿಲ್ಲಾ ಪಂಚಾಯತ್ ಇಂಜಿನಯರಿಂಗ್ ವಿಬಾಗಕ್ಕೆ ಠೇವಣಿ ಇಡಲಾಗಿದೆ. ಏಪ್ರಿಲ್ 2007 ರಲ್ಲಿ ಕಾಮಗಾರಿ ಪ್ರಾರಂಭವಾಗಿದೆ.
2. ಕರ್ಜನ್ ಪಾರ್ಕ್ ಬ್ಲಾಕ್–2	0.50	ಪಂಪ್ ಸೆಟ್ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ.
3. ಸರ್ಕಾರಿ ಭವನ	01.50	ಬೋರ್ ವೆಲ್ ಕೊರೆಸುವುದು ವಿದ್ಯುತ್ ಶಕ್ತಿ ಅಳವಡಿಕೆ ಕಾರ್ಯ ಪೂರ್ಣಗೊಂಡಿದೆ
4. ಕೇಂದ್ರ ಸಸ್ಯಾಗಾರ	01.50	01.10 ಲಕ್ಷದ ವೆಚ್ಚದಲ್ಲಿ ಶೇಡ್ ನೆಟ್ ಮತ್ತು ಹೈಟೆಕ್ ಪಾಲಿ ಹೌಸ್ ದುರಸ್ಥಿ ಮಾಡಲಾಗಿದೆ. ಹಾಗೂ 0.40 ಲಕ್ಷದಲ್ಲಿ ನೆಲಮಟ್ಟದ ವಾಟರ್ ಟ್ಯಾಂಕ್ ದುರಸ್ಥಿ ಪಡಿಸಬೇಕಾಗಿದೆ

ಮೈಸೂರು ನಗರದಲ್ಲಿ ಈ ಕೆಳಕಂಡ ಪಾರ್ಕ್‌ಗಳ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಬೇಕಾಗಿದೆ.

1. ಕರ್ಜನ್ ಪಾರ್ಕ್ ಬ್ಲಾಕ್–2

2. ನಿಶಾದ್ ಬಾಗ್ ಪಾರ್ಕ್

3. ಜಲದರ್ಶಿನಿ ಅತಿಥಿ ಗೃಹ ಉದ್ಯಾನವನ

4. ಜಲಸನ್ನಿಧಿ(ಜಿಲ್ಲಾಧಿಕಾರಿಗಳು ನಿವಾಸ)

5. ಪ್ರಾದೇಶಿಕ ಆಯುಕ್ತರ ಕಛೇರಿ ಉದ್ಯಾನವನ

6. ಜಿಲ್ಲಾ ಉದ್ಯಾನವನ

7. ಕೆ.ಆರ್.ಆಸ್ಪತ್ರೆ ಉದ್ಯಾನವನ

8. ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ

9. ಗೋರ್ಡನ್ ಪಾರ್ಕ್

10. ಕರ್ನಾಟಕ ವಸ್ತು ಪ್ರದರ್ಶನದ ಆವರಣದ ವಸ್ತು ಪ್ರದರ್ಶನದ ಉದ್ಯಾನವನ

ಈ ಮೇಲ್ಕಂಡ ಉದ್ಯಾನವನಗಳ ಅಭಿವೃದ್ಧಿಗಾಗಿ ಅಂದಾಜು 102 ಲಕ್ಷ ರೂಪಾಯಿಗಳ ಅನುದಾನದ ಅವಶ್ಯಕತೆ ಇದೆ. ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಅಭಿವೃದ್ಧಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು. 2007–08 ನೇ ಸಾಲಿನಲ್ಲಿ ತೋಟಗಾರಿಕೆ ಉದ್ಯಾನವನಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಮೈಸೂರು ಉದ್ಯಾನವನಗಳ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ 20.00 ಲಕ್ಷ ರೂಪಾಯಿಗಳ ಅನುದಾನವನ್ನು ನೀಡಲಾಗಿದೆ.

ಅನುಬಂಧ

(ಕರ್ನಾಟಕ ವಿಧಾನ ಸಭೆ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:115)

ಮೈಸೂರು ನಗರದಲ್ಲಿರುವ ತೋಟಗಾರಿಕೆ ಇಲಾಖೆಗೆ ಸೇರಿದ

ಉದ್ಯಾನವನಗಳ ವಿವರ ಈ ಕೆಳಕಂಡಂತಿರುತ್ತದೆ.

ಉದ್ಯಾನವನಗಳು	ವಿಸ್ತೀರ್ಣ ಎಕರೆಗಳಲ್ಲಿ
1.ಕರ್ಜನ್ ಪಾರ್ಕ್ ಬ್ಲಾಕ್ ಗ1	**05**
2. ಕರ್ಜನ್ ಪಾರ್ಕ್ ಬ್ಲಾಕ್ ಗ2	08
3. ಕರ್ಜನ್ ಪಾರ್ಕ್ ಬ್ಲಾಕ್ ಗ3	08
4. ನಿಷಾದ್ ಬಾಗ್	15
5. ಜಲದರ್ಶಿನಿ ಅತಿಥಿ ಗೃಹ ಉದ್ಯಾನವನ	05
6. ಜಲಸನ್ನಿಧಿ(ಜಿಲ್ಲಾಧಿಕಾರಿಗಳ ನಿವಾಸ)	05
7. ಪ್ರಾದೇಶಿಕ ಆಯುಕ್ತರ ಉದ್ಯಾನವನ	06
8. ಗೋಡ್ಕಾನ್ ಪಾರ್ಕ್	05
9. ಜಿಲ್ಲಾ ಉದ್ಯಾನವನ	40
10. ಕೆ.ಆರ್.ಆಸ್ಪತ್ರೆ ಉದ್ಯಾನವನ	50
11. ಸರ್ಕಾರಿ ಭವನ ಅತಿಥಿ ಗೃಹ ಉದ್ಯಾನವನ	43
12.ಕರ್ನಾಟಕ ವಸ್ತು ಪ್ರದರ್ಶನ ಆವರಣದಲ್ಲಿರುವ ತೋಟಗಾರಿಕೆ ಇಲಾಖೆ ಉದ್ಯಾನವನ	02

13. ಕೇಂದ್ರ ಸಸ್ಯಾಗಾರ 10

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: (ಚಾಮರಾಜ) ಮಾನ್ಯ ಅಧ್ಯಕ್ಷರೆ, ಮೈಸೂರಿನ ಉದ್ಯಾನ ನಗರ ಇಂದು ಅದ್ವಾನ ನಗರವಾಗಿದೆ. ಏಕೆಂದರೆ ಆ ನಗರ ಪ್ರೇಮಿಗಳ ಓಡಾಟದ ಉದ್ಯಾನಿ ನಗರವಾಗಿದೆ. ಅದು ಯಾವುದನ್ನು ಕೂಡ ಸಮರ್ಥವಾಗಿ ನಿರ್ವಹಿಸುವಂತಹ ಶಕ್ತಿ ತೋಟಗಾರಿಕೆ ಇಲಾಖೆಯವರಿಗಾಗಲಿ ಅಥವಾ ಕಾರ್ಪೋರೇಷನ್ ನವರಿಗಾಗಲಿ ಖಂಡಿತವಾಗಿಯೂ ಕೂಡ ಇಲ್ಲ. ರಾಜಮಹಾರಾಜರುಗಳ ಕಾಲದ 20 ರಿಂದ 40 ಎಕರೆ,10–15 ಎಕರೆಗಳನ್ನು ಬಿಟ್ಟರು. ಆದರೆ ಇವೆಲ್ಲವು ಪಾಳುಬಿದ್ದು ಅಲ್ಲಿ ಏನು ನಡೆಯಬಾರದು ಆ ಅವ್ಯಹಾರಗಳು ಅಲ್ಲಿ ನಡೆಯುತ್ತಿದೆ. ಅಲ್ಲಿಗೆ ನಾನು ಕೂಡ ಹೋಗಿದ್ದೆ. ಕೆಲವನ್ನು ತೋರಿಸಿಲ್ಲವೆಂದು ಹೇಳಿ ಶಾಸಕರೊಬ್ಬರು, ಸಚಿವರೋಬ್ಬರು ತಮ್ಮ ಅಸಹಾಯಕತೆಯನ್ನು ತೋರಿಕೊಂಡರು. ಆದರೆ ಇಂತಹ ಒಂದು ಪರಿಸ್ಥಿತಿಯಲ್ಲಿ ನಗರಗಳನ್ನು ಇಡಬಾರದು. ನಗರದಲ್ಲಿ ವಾಯುಮಾಲಿನ್ಯ ಜಾಸ್ತಿಯಾಗುತ್ತಿದೆ. ಜನಗಳು ದಿನನಿತ್ಯ ತಮ್ಮ ಬೊಜ್ಜನ್ನು ಕರಗಿಸಿಕೊಳ್ಳುವುದಕ್ಕಾಗಿ ಓಡಾಡುವುದಕ್ಕೆ ಹೋಗುತ್ತಾರೆ. ಆ ದೃಶ್ಯವನ್ನು ನೋಡಿ ಅವರು ನಾಚಿಕೆಪಟ್ಟುಕೊಂಡು ಹೊರಗೆ ಬರುತ್ತಾರೆ. ಅಲ್ಲಿ ನಡೆಯುತ್ತಿರುವಂತಹ ಅವ್ಯವಹಾರವನ್ನು ನೋಡಿ ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದಾರೆ. ದಯಮಾಡಿ ತೋಟಗಾರಕಾ ಸಚಿವರು ಉದ್ಯಾನವನಗಳ ನಿರ್ಮಾಣ ಮತ್ತು ನಿರ್ವಹಣೆಯನ್ನು ಮಾಡಬೇಕೆಂದು ನನ್ನ ಕಳಕಳಿಯ ಪ್ರಾರ್ಥನೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್: ಮಾನ್ಯ ಅಧ್ಯಕ್ಷರೆ, ಸುಮಾರು 13 ಪಾರ್ಕ್‌ಗಳು ಮೈಸೂರು ನಗರದಲ್ಲಿದೆ. ಈಗಾಗಲೇ ಕರ್ಜನ್ ಪಾರ್ಕ ನಂ:1 ಗೆ 9,80,000,00 ರೂ ಗಳ ವೆಚ್ಚದಲ್ಲಿ ಅಲ್ಲಿ ರಸ್ತೆ ಮತ್ತು ಲೈಟಿಂಗ್ ಬೇರೆ ಬೇರೆ ಇತ್ಯಾದಿ ಕಾಮಗಾರಿಗಳ ಬಗ್ಗೆ ಹಣವನ್ನು ಒದಗಿಸಲಾಗಿದೆ ಮತ್ತು ಕಾಮಗಾರಿಗಳು ಚಾಲ್ತಿಯಲ್ಲಿದೆ. ಕರ್ಜನ್ ಪಾರ್ಕ್ ನಂ:2, ಸರ್ಕಾರಿ ಭವನ, ಅತಿಥಿ ಗೃಹ, ಉದ್ಯಾನವನ, ಕೇಂದ್ರ ಸಸ್ಯಾಗಾರಗಳಲ್ಲಿ ತೋಟಗಾರಿಕೆ ಇಲಾಖೆಯಿಂದ ಕಾಮಗಾರಿ ಕೈಗೊಳ್ಳಲಾಗಿತ್ತು. ಕರ್ಜನ್ ಪಾರ್ಕ್ ಬ್ಲಾಕ್ 3 ರ ಅಭಿವೃದ್ಧಿಯನ್ನು ಮೈಸೂರು ಮಹಾನಗರ ಪಾಲಿಕೆಗೆ ವಹಿಸಲಾಗಿದೆ. ಉಳಿದ ಪಾರ್ಕುಗಳಲ್ಲಿ ನಿರ್ವಹಣೆ ಮಾತ್ರ ಮಾಡಲಾಗುತ್ತಿದೆ. ಕಾಮಗಾರಿ

ಕೈಗೊಂಡ ಪಾರ್ಕುಗಳ ವಿವರವನ್ನು ತಮಗೆ ಒದಗಿಸಲಾಗಿದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಅಲ್ಲಿ ಕೆಲಸ ಏನು ಆಗುತ್ತಿಲ್ಲ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್: ಕ್ರಮ ಕೈಗೊಳ್ಳುತ್ತಿದ್ದೇವೆ.

ಆಳಂದ ಪಟ್ಟಣದಲ್ಲಿ ಸಹಕಾರಿ ಸೇವಾಸಂಘ ಸ್ಥಾಪನೆ (VSSNL)

71 : (408) ಶ್ರೀ ಬಿ.ಆರ್.ಪಾಟೀಲ್(ಆಳಂದ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1. ಆಳಂದ ಪಟ್ಟಣದಲ್ಲಿ ಸಹಕಾರಿ ಸೇವಾ ಸಂಘ (ವಿಎಸ್ಎಸ್ ಎನ್ಎಲ್) ಇಲ್ಲದಿರುವುದು ಸರ್ಕಾರ ಗಮನಿಸಿದೆಯೇ?

2. ಈ ಸಹಕಾರಿ ಸೇವಾ ಸಂಘ ಸ್ಥಾಪನೆ ಮಾಡದಿಲು ಕಾರಣವೇನು?

3. ಆಳಂದ ತಾಲ್ಲೂಕಿನ ಹಿರೋಳ್ಳಿ ಗ್ರಾಮದಲ್ಲಿ ಈ ಮುಂಚಿತವಾಗಿ ವಿಎಸ್ಎಸ್ಎನ್ಎಲ್ ಇದ್ದು ಆದರೆ ಈಗ ಮುಚ್ಚಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಪುನಃ ಅದನ್ನು ಪ್ರಾರಂಭ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಜಿ.ಟಿ.ದೇವೇಗೌಡ

1. ಆಳಂದ ಪಟ್ಟಣದಲ್ಲಿ ಈ ಹಿಂದೆ ಸೇವಾ ಸಹಕಾರಿ ಸಂಘ ಆಳಂದ ಎಂಬ ಸಂಘವಿದ್ದು. ಇದು 1961 ರಲ್ಲಿ ನೋಂದಣಿಯಾಗಿರುತ್ತದೆ ಈ ಸಂಘದ ವ್ಯವಹಾರವು ಸ್ಥಗಿತಗೊಂಡ ಹಿನ್ನೆಲೆಯಲ್ಲಿ 1972ರಲ್ಲಿ ಸ್ಥಾಪನೆಗೊಳಿಸಲಾಗಿದೆ. ಪ್ರಸ್ತುತ ಸದರಿ ಸೇವಾ ಸಹಕಾರಿ ಸಂಘವು